ಸೃಜನಿ

I S S N: 2583-3510

SIRDF JOURNALS

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 57-60
Bi-Monthly, Peer-Reviewed, Open Access, Indexed Journal

editor@srujani.in
www.srujani.in

# “ಯೋಗ ಯೋಗಿಯ ಯೋಗಸ್ಥಃ”

**ಡಾ. ಅರುಣಕುಮಾರಿ ಬಿ ಎನ್**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ)

***Abstract:***

*ಈ ಪ್ರಬಂಧವು ರಾಗಂ ಅವರ ‘ಯೋಗಸ್ಥಃ’ ಕೃತಿಯ ವಿಮರ್ಶಾತ್ಮಕ ನೋಟವಾಗಿದೆ. ’ಯೋಗಾ ಯೋಗಿಯ ಯೋಗಸ್ಥಃ’ ಎಂಬ ಶೀರ್ಷಿಕೆಯ ಈ ಬರಹವು, ಮುಖ್ಯವಾಗಿ ಸಿದ್ಧೇಶ್ವರ ಶ್ರೀಗಳ (ಸಿದ್ಧೇಶ್ವರ ಸ್ವಾಮೀಜಿ) ಜೀವನ, ವ್ಯಕ್ತಿತ್ವ, ಮತ್ತು ಆಧ್ಯಾತ್ಮಿಕ ಅನುಭವಗಳನ್ನು, ರಾಗಂ ಅವರ ಒಡನಾಟದ ಮೂಲಕ ವಿಶ್ಲೇಷಿಸುತ್ತದೆ. ’ಯೋಗಸ್ಥಃ’ ಕೃತಿಯು ಕೇವಲ ಒಂದು ಜೀವನ ಚರಿತ್ರೆ ಅಥವಾ ಘಟನೆಗಳ ದಾಖಲೆಯಲ್ಲ, ಬದಲಿಗೆ ಮುಂದಿನ ಪೀಳಿಗೆಗೆ ಗುರಿ ಮತ್ತು ನೈಜತೆಯನ್ನು ತೋರಿಸುವ ಕನ್ನಡಿಯಾಗಿದೆ. ರಾಗಂ ಅವರ ಕೃತಿಯು ಸಿದ್ಧೇಶ್ವರ ಶ್ರೀಗಳ "ಶಿವಂ ಸರ್ವಮಯಂ" ಎಂಬ ತತ್ವದ ಪ್ರತಿರೂಪವಾದ ನಿರಂಜನ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಅವರ ಜೀವನವು ಅಧೀನದ ಬದುಕಾಗಲಿ, ಯಾರಿಗೋಸ್ಕರ ಬದುಕಿದ ಬದುಕಾಗಲಿ ಆಗಿರದೆ, ಸಂಪೂರ್ಣವಾಗಿ ಸರ್ವತಂತ್ರ ಸ್ವತಂತ್ರವಾಗಿತ್ತು. ಶ್ರೀಗಳು ಬದ್ಧತೆಗಿಂತ ಶುದ್ಧತೆಗೆ ಒತ್ತು ನೀಡಿದವರು. ಅವರ ಸರಳತೆ ಮತ್ತು ಸಾಗರದಷ್ಟು ಆಲೋಚನೆಯನ್ನು ಮೂಡಿಸುವ ವ್ಯಕ್ತಿತ್ವವೇ ನಿಜವಾದ ಸಾಧನೆ ಎಂದು ಕೃತಿ ವಿವರಿಸುತ್ತದೆ. ಲೇಖಕರು ಸಿದ್ಧೇಶ್ವರರನ್ನು ಸಂತೆಯೊಳಗಿನ ಸಂತ ಎಂದು ಪರಿಚಯಿಸುತ್ತಾರೆ, ಅವರ ಬದುಕು ಲೋಕದಂತೆ ಇರದೆ ಶುದ್ಧವಾದ, ದಾಹ ಮೋಹ ವ್ಯಾಮೋಹಗಳಿಂದ ದೂರವಾದ ಜೀವನ ಮೌಲ್ಯಗಳನ್ನು ಸಾರುತ್ತದೆ. ರಾಗಂ ಅವರ ಬರಹವು ಸಿದ್ಧೇಶ್ವರರ ಬದುಕಿನ ಪಾರದರ್ಶಕತೆಯನ್ನು ಕಟ್ಟಿಕೊಡುತ್ತದೆ. ಕೃತಿಯಲ್ಲಿ ಗುರು–ಶಿಷ್ಯರ ಬಾಂಧವ್ಯ ಅಡಗಿದೆ, ಮತ್ತು ’ಆಸಕ್ತಿಯನ್ನು ಅಂಟಿಸಿಕೊಂಡು ಬದುಕು ನಡೆಸಬಾರದು’ ಎಂಬ ಗುರುಗಳ ಮಾತು ಸರಳತೆಯನ್ನು ಕಲಿಸುತ್ತದೆ. ಕುವೆಂಪು, ಬುದ್ಧ, ಟ್ಯಾಗೋರ್, ಮತ್ತು ಅಲ್ಲಮರ ವಚನಗಳ ಪ್ರಭಾವದ ಕುರಿತು ಪ್ರಬಂಧವು ಉಲ್ಲೇಖಿಸುತ್ತದೆ. ಒಟ್ಟಾರೆಯಾಗಿ, ’ಯೋಗಸ್ಥಃ’ ಕೃತಿಯು ಕೇವಲ ಆಧ್ಯಾತ್ಮಿಕತೆಯ ಚೌಕಟ್ಟನ್ನು ತೋರಿಸದೆ, ಸರಳತೆ, ಬದುಕಿನ ಬದ್ಧತೆ, ಸಾಮಾಜಿಕ ಕಳಕಳಿ ಮತ್ತು ಸೃಜನಾತ್ಮಕ ಮೌಲ್ಯಗಳನ್ನು ಮಾನವನಲ್ಲಿ ಬಿತ್ತಿದ ಮಹಾನ್ ಚೇತನದ ಅಂತರಂಗವನ್ನು ನಮ್ಮ ಮುಂದೆ ನಿಲ್ಲಿಸುತ್ತದೆ.*

**Keywords:** *ಯೋಗಸ್ಥಃ, ಸಿದ್ಧೇಶ್ವರ ಶ್ರೀಗಳು, ರಾಗಂ, ಸರಳತೆ, ಸರ್ವತಂತ್ರ ಸ್ವತಂತ್ರ, ಯೋಗಿ/ಸಂತ, ಜೀವನ ಮೌಲ್ಯಗಳು, ಆಧ್ಯಾತ್ಮಿಕ ಅನುಭವ*

**ಪೀಠಿಕೆ**

ನಾನು ಓದಿದ ರಾಗಂರವರ ‘ಯೋಗಸ್ತ‘ ಕೃತಿ ಪ್ರತಿ ಸಂದರ್ಭದಲ್ಲೂ ಮನಸ್ಸಿನ ಪಕ್ವತೆಗೆ ಎಡತಾಕುವಂತದ್ದು. ಆಗು ಹೋಗುಗಳೆಲ್ಲ ಶಿವನು ರೂಪ ನಿರೂಪಗಳೆಲ್ಲ ಶಿವನು. ಸೃಷ್ಟಿಗಳೆಲ್ಲ ಶಿವನು. ನಾನು ನೀನೆಂಬುದೆಲ್ಲ ಶಿವನು ಚರ ಅಚರ ಜೀವಜಗ ಏನೆಲ್ಲಾ ಶಿವನು ಪೂಜಕನು ಅವನೇ, ಹೆಚ್ಚೇನು

**_Please cite this article as:_** ಅರುಣಕುಮಾರಿ ಬಿ ಎನ್. (2025). ಯೋಗ ಯೋಗಿಯ ಯೋಗಸ್ಥಃ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 57–60

ಇರುವುದೆಲ್ಲ ಅವನ ವಿಳಾಸ, ಎಂಬ ಈಶವ್ಯಾಶೋಪನಿಷತ್ತಿನ ಸಾಲುಗಳು 'ಶಿವಂ ಸರ್ವಮಯಂ' ಮಾತಿನ ಪ್ರತಿರೂಪವೇ ಸರಿ. ಮಹಾಬೋಧಿಯ ಹಾದಿಯಲ್ಲಿ ಎಂಬ ವಿಶೇಷ ಕಡೆಯಲ್ಲಿ ಪ್ರಾರಂಭವಾಗುವ ಬರಹ ಕೇವಲ ಘಟನೆಗಳ ನೆನಪು ಅಥವಾ ವ್ಯಕ್ತಿಯ ವ್ಯಕ್ತಿತ್ವ ಮತ್ತೊಬ್ಬರ ಮೇಲೆ ಬೀರುವ ಪ್ರಭಾವ ಮತ್ತು ದಾಖಲೆಯಲ್ಲ, ಮುಂದಿನ ಗುರಿಯ ನೈಜತೆಗೆ ಹಿಡಿದ ಕನ್ನಡಿ ಎಂದರೆ ತಪ್ಪಿಲ್ಲ. ಮೌನಿಯ ಮೌನ ಮಹಾದರ್ಶನ ಅದು ಪೀಳಿಗೆಗೆ ಮಾತ್ರವಲ್ಲ ಇಡೀ ಬ್ರಹ್ಮಾಂಡ ವ್ಯಾಪ್ತಿಯದ್ದು ಎಂಬುದನ್ನು ಸಿದ್ದೇಶ್ವರರ ಚಿಂತನೆಯ ಮಾತುಗಳು ಮತ್ತು ಅವರ ಒಡನಾಡಿಗಳ ಅನುಭಾವದಿಂದ ಉದ್ದೀಪನಗೊಂಡವು. ಇದಕ್ಕೆ ಸಾಕ್ಷಿಯಾಗಿ ರಾಗಂ ರ ಯೋಗಸ್ಥ ಕೃತಿ "ಯೋಗಾತೀತಂ ಮನೋತಿತಂ ಭಾವತೀತ ನಿರಂತರ ಸರ್ವಶೂನ್ಯಂ ನಿರಾಕಾರಂ ಪರಮಾನಂದ ಮ ಮ ವಿಯಾ ಎಮ್" ಎಂಬ ವಾಕ್ಯ ಕೇವಲ ಯೋಗಕ್ಕೆ ಮಾತ್ರ ಸೀಮಿತವಲ್ಲ, ಮನಸ್ಸು ಮತ್ತು ಶೂನ್ಯತೆಯನ್ನು ಹುಡುಕಿ ಹೊರಟವರೆಲ್ಲರಿಗೂ ನಿರಾಕಾರದ ಸತ್ಯದರ್ಶನ ಪಡೆದು ಮತ್ತೊಬ್ಬರ ಬದುಕಿಗೆ ಆಕಾರ ಮತ್ತು ಸಾಕಾರಕ್ಕೆ ಸಾಕ್ಷಿಯಾಗುತ್ತಾನೆ ಎಂಬುದಕ್ಕೆ ಅನ್ವಯವಾಗುತ್ತವೆ. ಸಿದ್ಧೇಶ್ವರ ಶ್ರೀಗಳ ಬದುಕು ಮತ್ತು ಅನುಭವಗಳು ಈ ಕೃತಿಯಲ್ಲಡಗಿವೆ.

'ಸಂತೆಯಿಂದ ಸಂತನೆಡೆಗೆ' ಎಂಬ ಮಾತೆ ಜೀವನ ಮತ್ತು ದರ್ಶನ, ಈ ಎರಡು ಮಹತ್ವಪೂರ್ಣ ಮೈಲಿಗಲ್ಲನ್ನು ಅಪ್ಪಿದಕ್ಕೆ ಸಾಕ್ಷಿ ರಾಗಂ ರವರ ಯೋಗಸ್ಥ ರಾಗಂ ಮತ್ತು ಸಿದ್ದೇಶ್ವರ ಶ್ರೀಗಳ ಒಡನಾಟ ಕೃತಿಯ ಮೂಲಕ ಕಂಡುಬಂದರೂ ಸಮ್ಮೇಳನವಿದೆ.

ಇಲ್ಲಿ ಜ್ಞಾನ ಮತ್ತು ಭಾವದ ಗುರು ಜಮಾದಾರರ ಒಡನಾಟ, ಪಠ್ಯ ಮತ್ತು ವ್ಯಕ್ತಿತ್ವ ರೂಪಿಸುವಲ್ಲಿನ ಅಸಮಾನ್ಯವೇ ಸರಿ. ರಾಗಂರವರೆ ಹೇಳುವಂತೆ 'ವಿದ್ಯೆ ಮತ್ತು ಅಭ್ಯಾಸದಲ್ಲಿ ಸ್ವಂತಿಕೆಗಿಂತ ಸ್ವಾತಂತ್ರವೋ ಮುಖ್ಯವಾದದ್ದು. ದೂರ ದೃಷ್ಟಿ ಅಂದರೆ ಅಗೆಲ್ಲ ಮಕ್ಕಳನ್ನು ದೂರ ಇಟ್ಟು ಭವಿಷ್ಯಕ್ಕಾಗಿ ತಯ್ಯಾರು ಮಾಡುವ ವಸ್ತು ಎನ್ನುವ ಶುಷ್ಕ ಮನಸ್ಥಿತಿಗೆ ತಂದೆ ತಾಯಿಗಳು ಬಂದಿರಲಿಲ್ಲ. ಬಡತನವೋ ಸಿರಿತನವೋ ಜೊತೆಯಲ್ಲಿ ಮಕ್ಕಳಿರಬೇಕು ಎಂಬ ಮಾತು ವ್ಯಾಮೋಹದ ಪ್ರತೀಕವಲ್ಲ. ಬದುಕಿನ ಹಂತಗಳನ್ನು ಸಂಪಾದಿಸುವ ಸ್ಥಿತಪ್ರಜ್ಞೆ, ಇದೇ ವ್ಯಕ್ತಿತ್ವದೊಳಗಿನ ಒಡನಾಟ ಅಲ್ಲವೆ ರಾಗಂ ಅವರ ಸಾಹಿತ್ಯ ಕೃಷಿ ಹುಲುಸಾಗಿ ಬೆಳೆಯುವಂತೆ ಮಾಡಿದ್ದು, ಸಂತೆಯಿಂದ ಸಂತನೊಡನಾಟ ಇದ್ದದ್ದು, ಸಂತೆಯ ವಿಚಾರಗಳ ಚಿಂತನೆಗೆ ಒಯ್ದದ್ದು ಇದು ಅತಿಶಯೋಕ್ತಿಯಲ್ಲ. ಒಡನಾಟವಿಲ್ಲದ ವ್ಯಕ್ತಿಯನ್ನು ಅವರ ಮೌನವನ್ನು ಬಹುಮುಖ ಚಿಂತನೆಗೆ ಕೊಂಡೊಯ್ಯುವಂತೆ ಮಾಡುವುದೇ ಯೋಗಸ್ಥಃ.

ಹಿರೇಮಠದ ಗುರುಗಳು ಹೇಳುವಂತೆ 'ಅವರು ಅವರಿವರಂತೆ ಬದುಕಲಿಲ್ಲ ಮತ್ತು ಅವರು ಅವರಿಗಾಗಿಯೇ ಬದುಕಲಿಲ್ಲ, ಅವರು ಅವರಂತೆ ಬದುಕಿದರು'. ಅವರದು ಅಧೀನದ ಬದುಕಲ್ಲ. ಅವರು ಯಾರದೋ ಅರ್ಜಿ, ಮರ್ಜಿ ಮತ್ತು ವರ್ಜಿಗಳಿಗಾಗಿ ಬದುಕಿದವರಲ್ಲ. ಏಕೆಂದರೆ, ಅವರು ಸರ್ವತಂತ್ರ ಸ್ವತಂತ್ರ ಸಿದ್ದೇಶ್ವರ, ಅವರದು ನಿರಂಜನ ವ್ಯಕ್ತಿತ್ವ, ಅವರು ತಮ್ಮ ಬದುಕಿನುದ್ದಕ್ಕೂ ದಾಹ ಮೋಹ ವ್ಯಾಮೋಹಗಳನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಸಿದ್ದೇಶ್ವರರು ವೀರಳರಲ್ಲಿ ವಿರಳರು. ಅವರು ಸರಳರಲ್ಲಿ ಸರಳರು, ಸಿದ್ದೇಶ್ವರರಂತವರು ಲೋಕದಂತೆ ಬಾರರು ಮತ್ತು ಲೋಕದಂತೆ ಇರರು ಅವರಿಗೆ ಬದ್ಧನಾಗಿರುವುದು ಬೇಕಿರಲಿಲ್ಲ, ಅವರಿಗೆ ಶುದ್ಧನಾಗಿರುವುದು ಬೇಕಿತ್ತು' ಎಂಬ ಮಾತುಗಳು ಸಂತೆಯೊಳಗಿನ ಸಂತನ ವ್ಯಕ್ತಿತ್ವದಿಂದ ಭಿನ್ನವಾಗಿ ಹೊರ ನಡೆದ ಸಿದ್ದೇಶ್ವರರ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

ಒಡನಾಡಿಯಾಗಿ ಆನುಭವಿಕ ನೆಲೆಯಲ್ಲಿ ಅರಿತು ಬೆರೆತ ರಾಗಂ ರವರ ಬರಹದಲ್ಲಿ ಸಿದ್ದೇಶ್ವರರ ಬದುಕಿನ ಪಾರದರ್ಶಕತೆ ನಮ್ಮ ಕಣ್ಮುಂದೆ ಕಟ್ಟಿದಂತೆ

ತಂದು ಕೊಡುತ್ತದೆ. ಇವರು ಸಂತನೋ? ಇನ್ನೂ ಒಂದು ಹೆಜ್ಜೆ ಮುಂದುವರೆದರೆ ದೇವರೆಂದು ಭಕ್ತಿಪರಶನಾಗಬೇಕೊ? ಎಂಬ ಪ್ರಶ್ನೆ ನಮ್ಮನ್ನು ಸದಾ ಕಾಡುತ್ತದೆ. ಆದರೆ, ಲೇಖಕರೇ ಹೇಳುವಂತೆ ಸಂತೆಯೊಳಗಿನ ಬದುಕಿನಿಂದ ದೂರ ಉಳಿದವರು. ಆದರೆ ನಮ್ಮ ಸಂತನ ನಡಿಗೆಗೆ ದಾರಿ ದೀಪವಾದವರು. ಸಿದ್ಧೇಶ್ವರ ಶ್ರೀಗಳು 'ಸ್ವಾಮೀಜಿ' ಎಂಬ ಪದದಿಂದ ಪದಶಹ ದೂರ ಉಳಿದವರು. ಸ್ವಾಮಿತ್ವವನ್ನು ಪದತಳಗೊಳಿಸದೆ ಅಸಮಾನ್ಯತೆ ಮೆರೆದವರು. ಯೋಗಸ್ಥಃ ಕೃತಿಯ ಮೂಲಕ ನಾವು ಅವರನ್ನು ವ್ಯಾಖ್ಯಾನಿಸುವುದಲ್ಲ, ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಸರಳತೆಯಲ್ಲಿ ಸಾಗಿ ಸಾಗರದಷ್ಟು ಆಲೋಚನೆಯನ್ನು ಮೂಡಿಸುತ್ತದೆ. ಅದೇ ನಿಜವಾದ ಸಾಧನೆ. ಇದು ಓದುಗ ಮಹಾಶಯನಿಗಾಗಲಿ ಅಥವಾ ಅವರ ಒಡನಾಡಿಗಳಿಗಾಗಲಿ ಸರ್ವ ವೇದ್ಯ, ಗುರು ಶಿಷ್ಯರ ಬಾಂಧವ್ಯ ಇಲ್ಲಡಗಿದೆ. ಕೃತಿಯನ್ನು ಓದಿದಾಗ ನಮಗೆ ಹೆಚ್ಚಾಗಿ ಕಾಡುವಂಥದ್ದು ಗುರುಗಳೇ ಹೇಳುವಂತೆ "ಆಸಕ್ತಿಯನ್ನು ಅಂಟಿಸಿಕೊಂಡು ಬದುಕು ನಡೆಸಬಾರದೆಂಬ" ಮಾತು. ಮನುಷ್ಯನಿಗೆ ಮೊದಲನೆಯದಾಗಿ ಇದು ಸರಳತೆಯನ್ನು ಕಲಿಸಿಕೊಡುತ್ತದೆ. ಈ ಸರಳತೆ ಅವರ ನಿಲುವಿನ ಪ್ರತಿರೂಪವೂ ಹೌದು.

ಸಿದ್ದೇಶ್ವರರ ಆಧ್ಯಾತ್ಮಿಕ ಅನುಭವ ಲೌಕಿಕ ಬದುಕಿನ ಅನುಭವದಿಂದ ಬೇರ್ಪಟ್ಟಿದ್ದು, ಕೂಡಿದರೆ ಕೆನೆಮೊಸರು ಭಾಗದಲ್ಲಿ ರಾಗಂರವರೇ ಹೇಳುವಂತೆ ಸಿದ್ದೇಶ್ವರರ ಓದಿನ ಮತ್ತು ಜ್ಞಾನದ ಹಸಿವಿನ ಗಾತ್ರ ಕಂಡುಬರುತ್ತದೆ. ಮಹಾಕಾವ್ಯ ಪತಿಕರಾಗಿ ಬಣ್ಣ, ಕಂದಾಚಾರ, ಪಂಥ ಪೀಠ, ಮೆರವಣಿಗೆ ದಕ್ಷತೆ, ಸ್ವಾಮಿತ್ವಗಳನ್ನು ಮೀರಿ ನಿಂತ ವೀರ ನಿಲುವು ಅವರದು. ಕುವೆಂಪು ಮತ್ತು ಸಿದ್ದೇಶ್ವರರ ಹೋಲಿಕೆ ತತ್ವ ದರ್ಶನ ಸಂಬಂಧದ್ದು. "ಬುದ್ಧ, ಟ್ಯಾಗೋರರಾಧ್ಯಯನ, ಅಲ್ಲಮನ ವಚನಗಳ ವಿವೇಚನೆ, ಬದುಕಿನುದ್ದಕ್ಕೂ ಆರಗಿಸಿಕೊಂಡ ಆಲದ ಮರ ಶ್ರೀಗಳು"ಎನ್ನುವ ಮಾತು ಅತಿಶಯೋಕ್ತಿಯಲ್ಲ.

'ಕವಿ ಕಾಯುವ ಧರ್ಮ' ಭಾಗದಲ್ಲಿ ಸಾರ್ವಜನಿಕ ಬದುಕಿನ ಬದ್ಧತೆಯನ್ನು ಸರಳವಾಗಿ ಹೇಳುವ ಶ್ರೀಗಳ ಮಾತು ಎಲ್ಲರನ್ನು ಜವಾಬ್ದಾರಿಯ ನಡಿಗೆಯ ಕಡೆಗೆ ಕೊಂಡುಯುವಂಥದ್ದು. "ಸಣ್ಣಪುಟ್ಟ ಬೇಸರ, ಅಸಮಾಧಾನ, ತಕರಾರು ಇರ್ತಾವ ಇರಬೇಕು. ಇದಾ ಜೀವನ ಇಲ್ಲಿ ಎಲ್ಲರೂ ನಮ್ಮನ್ನು ನಮ್ಮ ಸಾಧನೆಯನ್ನು ಗೌರವಿಸಲೇಬೇಕು ಅಂತ ಎಲ್ಲಿ ನಿಯಮ ಅದ? ಹಾಗಂತ ಆ ಬೇಸರದ ಭಾವನೆಗಳನ್ನು ಸಾರ್ವಜನಿಕವಾಗಿ ಹಂಚಿ ಬಿಡಬಾರದು. ಸಾರ್ವತ್ರಿಕಗೊಳಿಸಬಾರದು. ಸಭೆಗೆ ಭೂಷಣವಾದದನ್ನು ಮಾತನಾಡಬೇಕು. ನಮ್ಮ ಮಾತುಗಳಿಂದ ನಮ್ಮ ಮರ್ಯಾದೆ, ಸಭೆಯ ಮರ್ಯಾದೆ, ಹೆಚ್ಚಾಗಬೇಕು. ಮಾತು ಮಾಣಿಕ್ಯ ಆಗೋಕು. ಮನೆ ಮನಸು ಮುರಿಯಬಾರದು." ಎಂಬ ಮಾತುಗಳು ಪ್ರತಿಯೊಬ್ಬರಿಗೂ ವಿವೇಕ ತುಂಬಿದ ನುಡಿಗಳು.

***'ಏಳು ಏಳು ಜಮದಗ್ನಿ ಲಿಂಗವೇ***
***ನಿದ್ದೆಯಲ್ಲಿ ಬಿದ್ದೇಕೆ ಆತ್ಮವೇ ಏಳು ಆಳದಿಂದ***
***– ಏಳು ಏಳು ಜಮದಗ್ನಿ ಲಿಂಗವೇ ಏಳು ಕಿರಣದಿಂದ'***
***ಎಂದು ಪ್ರಾರಂಭವಾಗುವ ಪದ್ಯ ಕೊನೆಯಲ್ಲಿ***
***ದೇವಜನಿತ ನೀ ನೆನೆಸಿ ಏಳು ತಿಳಿ ನೀನು***
***ಮರಣ ರಹಿತ***
***ಕಾಲ ಮೀರಿ ನೀ ಮರಳು ನಿನಗಹುದು***
***ಅಮರ ಪಟ್ಟ ವಿಧಿತ'***

ಎಂಬ ಸಾಲುಗಳು ಸಾಧಕನ ಮನಸ್ಸಿನಲ್ಲಿ ಮೊಳಗುತ್ತವೆ. ಇಡೀ ಪದ್ಯ ಮನುಷ್ಯನ ಜಾಗೃತ ಬದುಕನ್ನು ವಿಧಿ ಲಿಖಿತದಂತೆ ಬಿಂಬಿಸುತ್ತದೆ.

ಬರಹಗಾರನ ಬದುಕಿನ ತುಡಿತವನ್ನು ರಾಗಂ ರವರು ಸ್ಪಷ್ಟೀಕರಿಸುತ್ತಾರೆ. ಓರ್ವ ಲೇಖಕ, ಕವಿ, ದಾರ್ಶನಿಕ ಅಂದರೆ ಯಾರು? ಆತ ಹೇಗೆ ರೂಪಗೊಳ್ಳುತ್ತಾನೆ ಅನ್ನೋದನ್ನ ಸಮಾಜ ತಿಳ್ಕೊಂಡ್ರೆ ಸಾಕು, ಅವನಿಗೂ ಅದಕ್ಕೂ ಇರೋ ಸಂಬಂಧದ

ಪರಸ್ಪರ ಜವಾಬ್ದಾರಿ ವಿಚಾರ ಗೊತ್ತಾಗುತ್ತದೆ. ಸಾಹಿತ್ಯ ಅನ್ನೋದು ಏಕಮುಖವಲ್ಲ. ಅದು ಎರಡು ಮನಸ್ಸುಗಳ ಸಮಾವಿಷ್ಠತೆ, ಅಲ್ಲಿ ಒಂದು ಹೇಳೋ ಮನಸ್ಸು. ಮತ್ತೊಂದು ಕೇಳೋ ಮನಸ್ಸು ಒಂದು ಹಾಡೋ ಧ್ವನಿ ಇನ್ನೊಂದು ಹಾಡಿಸೋ ಧ್ವನಿ ಎಂದು ಮುಂದುವರೆಯುವ ಸಾಲುಗಳು ಕಾವ್ಯ ಅನ್ನೋ ಬೆಳೆಯನ್ನು ಜೋಪಾನ ಮಾಡಬೇಕು, ಕಾಳಜಿ ಮಾಡಬೇಕು ಎಂಬ ಮಾತುಗಳು ಸಾಮಾಜಿಕವಾಗಿ ಬರಹಗಾರನಿಗೆ ಇರಬೇಕಾದ ಜವಾಬ್ದಾರಿಯನ್ನು ತಿಳಿಸುತ್ತದೆ. ಒಟ್ಟಾರೆಯಾಗಿ ಯೋಗಸ್ಥಃ ಕೃತಿಯನ್ನು ಓದುತ್ತಾ ಹೋದರೆ ಎತ್ತಿಕೊಂಡವರ ಕೂಸದು ಅಂದರೆ ಸರಳತೆಯ ಪ್ರತಿಬಿಂಬ ಶ್ರೀಗಳಾದರೆ, ಬಹುಮುಖತೆಯ ಅಸ್ಮಿತೆ ರಾಗಂ ಎಂದರೆ ಅತಿಶಯೋಕ್ತಿಯಲ್ಲ. ಮಗುವಿನ ಮುಗ್ಧತೆ, ಕುತೂಹಲದ ಅಗಾಧತೆ ಕೃತಿಯೆಲ್ಲಡಗಿದೆ. ಆ ಕಾರಣದಿಂದಲೇ ನಾನು ಈ ಪ್ರಬಂಧಕ್ಕೆ ಯೋಗಾ ಯೋಗಿಯ ಯೋಗಸ್ಥ ಎಂಬ ಶೀರ್ಷಿಕೆ ನೀಡಿದ್ದೇನೆ. ಕೃತಿಯ ಬೆನ್ನುಡಿಯ ಸಾಲುಗಳು ಕೇವಲ ಬರಹ ಮಾತ್ರವಲ್ಲ ಅತಿ ಮಾನಸ ರೂಪಕ.

ಸಂತನ ನಡಿಗೆ ಸಮಾಜದ ಬದ್ಧತೆಯ ಕಡೆಗಿನ ಒಲವು, ತುಡಿತ ಯೋಗಸ್ಥಃದಲ್ಲಿದೆ. ಇದೇ ಹೊಸ ಆಲೋಚನೆಗಳಿಗೆ ಸಹದಾರಿ, ಬದುಕಿನ ದಿವ್ಯಪಥ ಅನಂತತೆಯ ಅಂತರಂಗ ಯೋಗಸ್ಥಃ. ಇಡೀ ಕೃತಿ ಕೇವಲ ಆಧ್ಯಾತ್ಮಿಕತೆಯ ಚೌಕಟ್ಟನ್ನು ತೋರಿಸುವುದಲ್ಲದೆ ಸರಳತೆ, ಬದುಕಿನ ಬದ್ಧತೆ, ಸಾಮಾಜಿಕ ಕಳಕಳಿ ಮತ್ತು ಸೃಜನಾತ್ಮಕ ಮೌಲ್ಯಗಳನ್ನು ಮನುಷ್ಯನಲ್ಲಿ ಸರಳವಾಗಿ ಬಿತ್ತಿದ ಮಹಾನ್ ಚೇತನದ ಅಂತರಂಗವನ್ನು ಯೋಗಸ್ಥ ಕೃತಿಯು ನಮ್ಮ ಮುಂದೆ ಪ್ರತಿಮೆಯಂತೆ ನಿಲ್ಲಿಸುತ್ತದೆ. ಬರೀ ಆದರ್ಶ ರೂಪದಲ್ಲಲ್ಲ. ಒಬ್ಬ ಶ್ರೇಷ್ಠ ವ್ಯಕ್ತಿಯ ಜೀವನ ಮೌಲ್ಯಗಳು ಮತ್ತೊಬ್ಬರ ಮೇಲೆ ಪ್ರಭಾವ ಮತ್ತು ಪರಿಣಾಮಕಾರಿಯಾಗಿ ಹೇಗೆ ನೆಲೆಗೊಳ್ಳುತ್ತವೆ ಎಂಬುದಕ್ಕೂ ಈ ಕೃತಿಯು ಸಾಕ್ಷಿ.

ಇದನ್ನು ಗುರುಗಳ ಒಡನಾಡಿಯಾಗಿ, ಶಿಷ್ಯನಾಗಿ, ಜೀವನ ಮೌಲ್ಯಗಳನ್ನು ಬರಹ ರೂಪದಲ್ಲಿ ರಾಗಂ ಕಟ್ಟಿಕೊಡುವ ದಾವಂತವನ್ನು, ಸರಳತೆಯ ಪ್ರತಿ ರೂಪವನ್ನು ತುಂಬಾ ಅಚ್ಚುಕಟ್ಟಾಗಿ ರಾಗಂರವರು ಕೃತಿಯಲ್ಲಿ ನೀಡಿದ್ದಾರೆ.

ಇನ್ನಷ್ಟೇ ಪ್ರಶ್ನೆ ಕೇಳುವುದಿತ್ತು, ಮುಗುಳ್ನಕ್ಕೆ ಮಹಾನುಭಾವ, 'ಇಷ್ಟೇ ಇಷ್ಟೇ ಹೇಳಿ ಹೋದ' ಎಂಬ ಸಾಲು ಇಡೀ ಕೃತಿಯಲ್ಲಿ ನನಗೆ ಕಾಡುವಂಥದ್ದು ಬದುಕಿನ ಬಗೆಗಿನ ವ್ಯಾಮೋಹಕ್ಕಿಂತ ಜೀವನ ಮೌಲ್ಯದ ಪ್ರಮಾಣವನ್ನು ಇದು ಹೆಚ್ಚು ಮಾಡುವಂಥದ್ದು, ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಸಿದ್ದೇಶ್ವರ ಶ್ರೀಗಳು ರಾಗಂರವರ ಈ ಕೃತಿಯಲ್ಲಿ ಕುವೆಂಪು ಮತ್ತು ಸಿದ್ದೇಶ್ವರ ಶ್ರೀಗಳ ಚಿಂತನೆ ಮತ್ತು ವಿಚಾರಧಾರೆಗಳು ಓದುಗನ ಆಲೋಚನೆಗೆ ಇನ್ನಷ್ಟು ಎಡೆ ಮಾಡಿಕೊಡುತ್ತವೆ. ಅಂದರೆ, ಸಿದ್ದೇಶ್ವರರ ಆಧ್ಯಾತ್ಮಿಕತೆ ಕುವೆಂಪುರವರ ವಿಚಾರ ಕ್ರಾಂತಿಗೆ ಆಹ್ವಾನ ಮತ್ತು ಉಪನಿಷತ್ತಿನ ಸಾಲುಗಳು ಹೀಗೆ ಸಮಾಜಮುಖಿ ಮನಸ್ಥಿತಿಗೆ ಒಂದೇ ದಾರಿ, ಇದನ್ನು ಕೃತಿಯ ಮೂಲಕ ಓದುಗರಿಗೆ ತಲುಪಿಸುವ ಜವಾಬ್ದಾರಿಯನ್ನು ರಾಗಂ ರವರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಒಟ್ಟಾರೆಯಾಗಿ ಇಡೀ ಕೃತಿ ಯೋಗಸ್ಥ ಮೂಲಕ ಹೊಸ ಆಲೋಚನೆಗಳನ್ನು ಕೊಡುವುದರ ಮೂಲಕ ಓದುಗರಿಗೆ ದಾರಿದೀಪವಾಗಿದೆ.

**ಆಕರ ಗ್ರಂಥ**


- ರಾಗಂ. (2024). *ಯೋಗಸ್ಥಃ*, ಪಿ.ಆರ್ ಪಬ್ಲಿಕೇಶನ್ಸ್.